ಅಲ್ಲಿ ಮೆಟೀರಿಯಲ್ಸ್ ಹಾಕಿಕೊಂಡಿದ್ದಕ್ಕೆ ನಾವು ಪರಿಹಾರ ಕೊಡುವಂತಹ ಪರಿಸ್ಥಿತಿ ಬರುವುದಿಲ್ಲ ಎಂಬುದು ನನ್ನ ಅನಿಸಿಕೆ.

ಶ್ರೀ ರಾಜಶೇಖರ ವಿ. ಶೀಲವಂತ :— ಸನ್ಮಾನ್ಯ ಅಧ್ಯಕ್ಷರೆ, ಐದು ವರ್ಷದವರೆಗೆ ಅಲ್ಲಿ ಮೆಟೀರಿಯಲ್ಸ್ ಕಲೆಕ್ಷನ್ಸ್ ಮಾಡಿದ್ದಾರೆ. ಐದು ವರ್ಷದವರೆಗೆ ಅವನ ಪೀಕ್ ಏನಾಯಿತು? ಹಾಳಾಗಿ ಹೋಯಿತು. ಯಾರ್ಯಾರು ವ್ಯಕ್ತಿಗಳು ಕೊಟ್ಟಿದ್ದರೋ ಆ ವ್ಯಕ್ತಿಗಳೆಲ್ಲಾ ಹಾಳಾಗಿ ಹೋದರು. ಅವರಿಗೆ ಮೊದಲು ಇವರ ಇಲಾಖೆಯವರು 'ನಾವು ನಿಮಗೆ ಕಂಪೆನ್ಸೇಷನ್ ಕೊಡುತ್ತೇವೆಂದು ತಿಳಿಸಿದ್ದಾರೆ. ಈಗ ಕಂಪೆನ್ಸೇಷನ್ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಬಹಳ ಸಮಸ್ಯೆ ಆಗುತ್ತದೆ.

ಅಧ್ಯಕ್ಷರು :— ಅದನ್ನು ಎಲ್ಲಿ ಬರೆದು ಕೊಟ್ಟಿದ್ದಾರೆ, ತಂದು ತೋರಿಸಿ. ಮಾನ್ಯ ಮಂತ್ರಿಗಳಿಗೆ ಹೇಳೋಣ.

ಧಾರವಾಡ, ಹಾವೇರಿ ಹಾಗೂ ಗದಗ ಜಿಲ್ಲೆಗಳಲ್ಲಿ ಕೆರೆಗಳ ಹೂಳು ತೆಗೆಯುವ ಕಾರ್ಯ.

295(1790) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ, ಹಾವೇರಿ ಮತ್ತು ಗದಗ್ ಜಿಲ್ಲೆಗಳಲ್ಲಿ ಇರುವ ಕೆರೆಗಳ ಸಂಖ್ಯೆ ಎಷ್ಟು; ಹಾಗೂ ಈ ಕೆರೆಗಳಲ್ಲಿನ ಹೂಳನ್ನು ತೆಗೆಯಿಸಲಾಗಿದೆಯೇ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಹಾಗಿದ್ದಲ್ಲಿ ಈ ಕೆರೆಗಳಲ್ಲಿನ ಹೂಳನ್ನು ತೆಗೆಯಿಸಲು ಖರ್ಚಾದ ಹಣ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಕಳೆದ ಮೂರು ವರ್ಷಗಳಲ್ಲಿ ಈ ಮೂರು ಜಿಲ್ಲೆಗಳಲ್ಲಿ ಹೊಸದಾಗಿ ನಿರ್ಮಾಣ ಮಾಡಲಾದ ಕೆರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಈ) ಈ ಜಿಲ್ಲೆಗಳಲ್ಲಿ ಕೆರೆಗಳ ನಿರ್ಮಾಣ ಕಾರ್ಯಕ್ಕೆ ಖರ್ಚು ಮಾಡಲಾದ ಹಣ ಎಷ್ಟು? (ಜಿಲ್ಲಾವಾರು ವರ್ಷವಾರು ಮಾಹಿತಿ ನೀಡುವುದು)

ಉ) ಈ ಮೇಲ್ಕಂಡ ಮೂರು ಜಿಲ್ಲೆಗಳಲ್ಲಿರುವ ನದಿ ಹಳ್ಳಗಳಿಗೆ ಕಳೆದ ಮೂರು ವರ್ಷದಲ್ಲಿ ನಿರ್ಮಿಸಲಾಗಿರುವ ಬಂದಾರಗಳ ಸಂಖ್ಯೆ ಎಷ್ಟು? ಹಾಗೂ ಇದಕ್ಕೆ ಖರ್ಚಾದ ಹಣ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಧಾರವಾಡ ಹಾವೇರಿ ಮತ್ತು ಗದಗ್ ಕೆರೆಗಳ ಸಂಖ್ಯೆ ಹಾಗೂ ಕೆರೆಗಳಲ್ಲಿನ ಹೂಳು ತೆಗೆದು ಸಂಖ್ಯೆ ;

ಜಿಲ್ಲೆ	ಕೆರೆಗಳ ಸಂಖ್ಯೆ	ಹೂಳೆತ್ತಿದ ಕೆರೆಗಳ ಸಂಖ್ಯೆ
ಧಾರವಾಡ	107	4
ಹಾವೇರಿ	261	2
ಗದಗ್	22	2

ಅ) ಹೂಳನ್ನು ತೆಗೆಯಿಸಲು ಮಾಡಿದ ಖರ್ಚಿನ ವಿವರ:

ಜಿಲ್ಲೆ	ಹೂಳೆತ್ತುವ ಕಾಮಗಾರಿ ಕೈಗೊಂಡ ಕೆರೆಗಳ ಸಂಖ್ಯೆ	ಖರ್ಚಾದ ಹಣ
ಧಾರವಾಡ	4	8.45 ಲಕ್ಷ ರೂ.
ಹಾವೇರಿ	2	3.42 ಲಕ್ಷ ರೂ.
ಗದಗ್	2	1.32 ಲಕ್ಷ ರೂ.

ಇ) ಕಳೆದ ಮೂರು ವರ್ಷಗಳಲ್ಲಿ ನಿರ್ಮಿಸಲಾದ ಹೊಸ ಕೆರೆಗಳ ಸಂಖ್ಯೆ:

ಜಿಲ್ಲೆ	1996-97	1997-98	1998-99	ಒಟ್ಟು
ಧಾರವಾಡ	--	--	--	--
ಹಾವೇರಿ	--	--	--	--
ಗದಗ್	--	1	-	1ದುಂದೂರ

ಈ) ಕಳೆದ ಮೂರು ವರ್ಷಗಳಲ್ಲಿ ಕೆರೆಗಳ ನಿರ್ಮಾಣಕ್ಕೆ ಖರ್ಚು ಮಾಡಿದ ಹಣ:

ಜಿಲ್ಲೆ	1996-97	1997-98	1998-99	ಒಟ್ಟು
ಧಾರವಾಡ	--	--	--	--
ಹಾವೇರಿ	--	--	--	--
ಗದಗ್	--	3.82	0.02	3.84

ಉ) ಕಳೆದ ಮೂರು ವರ್ಷಗಳಲ್ಲಿ ನಿರ್ಮಿಸಲಾದ ಬಂದಾರಗಳ ಸಂಖ್ಯೆ ಮತ್ತು ಖರ್ಚಾದ ಹಣ:

ಜಿಲ್ಲೆ	1996-97		1997-98		1998-99		ಒಟ್ಟು	
	ಸಂ.	ಖರ್ಚ	ಸಂ.	ಖರ್ಚ	ಸಂ.	ಖರ್ಚ	ಸಂ.	ಖರ್ಚ
ಧಾರವಾಡ	--	17.39	1	4.17	-	0.60	1	22.16
ಹಾವೇರಿ	--	141.44	-	170.63	5	158.00	5	470.07
ಗದಗ್	--	--	--	--	--	--	--	--

ಶ್ರೀ ಚಂದ್ರಕಾಂತ್ ಬೆಲ್ಲದ್ :— ಮಾನ್ಯ ಅಧ್ಯಕ್ಷರೆ, ನಾನು ಬಹಳ ಪ್ರಮುಖವಾಗಿ ಈ ಮಾನ್ಯ ಸಣ್ಣ ನೀರಾವರಿ ಮಂತ್ರಿಯವರಿಂದ ನಮ್ಮ ಮೊದಲಿನ ಧಾರವಾಡ ಜಿಲ್ಲೆಯಲ್ಲಿ ಏನು ನೀರಾವರಿಯ ಪಾತಳಿಯನ್ನು ಹೆಚ್ಚು ಮಾಡಬೇಕಾಗಿದೆ, ಆದರ ಬಗ್ಗೆ ಏನು ಕೆಲಸಗಳು ನಡೆದಿವೆ ಎನ್ನುವ ಮಾಹಿತಿ ತೆಗೆದುಕೊಳ್ಳಬೇಕೆಂದು ಕೇಳಿದ್ದೆ. ಆ ಕಾರಣಕ್ಕಾಗಿ ಪ್ರಮುಖವಾದ ಪ್ರಶ್ನೆ ಕೇಳಿದ್ದಕ್ಕೆ ಬರೇ ಸಂಖ್ಯೆ ಕೊಟ್ಟಿದ್ದಾರೆ. ಆದರೆ ವಿವರ ಕೊಡಬೇಕೆಂದು ನಾನು ಕೇಳಿದೆ. ಯಾವ್ಯಾವ ಕೆರೆಗಳ ಹೂಳು ಎತ್ತಿದ್ದೀರಿ? ಪ್ರತಿ ಒಂದು ಕೆರೆಗೂ ಖರ್ಚು ಮಾಡಿದ ಹಣವೆಷ್ಟು? ಇದರ ಮಾಹಿತಿ ಕೊಡಬೇಕು ಎಂದು ನಾನು ಕೇಳಿದೆ. ಅವರಿಂದ ಸರಿಯಾದಂತಹ ಮಾಹಿತಿ ಬಂದಿಲ್ಲ. ಆದರ ಜೊತೆಗೆ ಹೊಸ ಕೆರೆಗಳನ್ನು ಏನಾದರೂ ಈ ಜಿಲ್ಲೆಯಲ್ಲಿ ನಿರ್ಮಾಣ ಮಾಡಿದ್ದೀರೋ ಹೇಗೆ? ಮಾಡಿದ್ದರೆ ಆದರ ಡೀಟೇಲ್ಸ್ ಸಹ ಬೇಕು. ಆದಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ನಾನು ಮಾಹಿತಿ ಕೇಳಿದ್ದೆ. ಅದೂ ಇದರಲ್ಲಿ ಬಂದಿಲ್ಲ. ಬಹಳ ಪ್ರಮುಖವಾದಂತಹ ನಿಮ್ಮ ಚಿಕ್ಕ ನೀರಾವರಿ ಇಲಾಖೆ. ಇವತ್ತಿನ ದಿವಸ ಜಲ ಪಾತಳಿ ಕೆಳಕ್ಕೆ ಹೋಗುತ್ತಿದೆ, ಅದನ್ನು ಹೆಚ್ಚಿಸುವಂತಹ ಕಾರ್ಯದಲ್ಲಿ ಹೂಳು ತೆಗೆಯುವುದು, ಬಾಂದಾರಗಳನ್ನು ನಿರ್ಮಾಣ ಮಾಡುವುದು. ಹೊಸ ಕೆರೆಗಳ ನಿರ್ಮಾಣ ಮಾಡುವುದು, ಇಂಥ ಪ್ರಮುಖವಾದ ಕಾರ್ಯದಲ್ಲಿ ನಿಮ್ಮ ಅವಧಿಯಲ್ಲಿ ಏನೇನು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಸರಿಯಾದಂತಹ ಮಾಹಿತಿ ಕೊಟ್ಟಿಲ್ಲ. ಬರೇ ಸಂಖ್ಯೆ ಕೊಟ್ಟಿದ್ದೀರಿ ಅಷ್ಟೇ. ದಯವಿಟ್ಟು ಇದಕ್ಕೆಲ್ಲಾ ಖರ್ಚು ಮಾಡಿದ ಹಣ ಮತ್ತು ಸರಿಯಾದಂತಹ ಮಾಹಿತಿ ಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು :— ನ್ಯಾಯವಾಗಿ ಇದು ಅನ್-ಸ್ಟಾರ್ಡ್ ಕ್ವೊಶ್ಚನ್ ಆಗಬೇಕು. ಇದು ಸ್ಟಾರ್ಡ್ ಆಗುವುದಕ್ಕೆ ಆಗುವುದಿಲ್ಲ. ಇಷ್ಟು ಡೀಟೇಲ್ ರಿಪ್ಲೈ-ನಮ್ಮ ಬುದ್ಧಿವಂತರು ಮಾಡಿದ್ದಾರೆ.

ಶ್ರೀ ತಿಪ್ಪೇಸ್ವಾಮಿ :— ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿದ ಹಾಗೆ ಈಗ ಧಾರವಾಡ, ಹಾವೇರಿ, ಗದಗ್ ತಾಲ್ಲೂಕುಗಳಲ್ಲಿ ಹೂಳೆತ್ತಿರುವ ಕೆರೆಗಳು ಎಷ್ಟು ಎಂದು ಕೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 4 ಕೆರೆಗಳು. ಹಾವೇರಿ ಜಿಲ್ಲೆಯಲ್ಲಿ ಎರಡು ಕೆರೆ, ಗದಗ್ ಜಿಲ್ಲೆಯಲ್ಲಿ ಎರಡು ಕೆರೆ. ಆ ಕೆರೆಗಳ ಪೈಕಿ ಒಂದೊಂದು ಜಿಲ್ಲೆಯಲ್ಲಿ

ಎಷ್ಟೆಷ್ಟು ಕೆರೆಗಳು ಇದ್ದಾವೆಂದು ಕೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 107 ಕೆರೆಗಳು. ಹಾವೇರಿ ಜಿಲ್ಲೆಯಲ್ಲಿ 261 ಕೆರೆಗಳು. ಗದಗ್ ಜಿಲ್ಲೆಯಲ್ಲಿ 22 ಕೆರೆಗಳು. ಇವತ್ತು ಈ ಕೆರೆಗಳಲ್ಲಿ ಹೂಳು ತೆಗೆದಿದ್ದಕ್ಕೆ ಎಷ್ಟೆಷ್ಟು ಖರ್ಚು ಆಗಿದೆ ಎಂದು ಕೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 4 ಕೆರೆಗಳಿಗೆ 8 ಲಕ್ಷದ 45 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ. ಹಾವೇರಿ ಜಿಲ್ಲೆಯಲ್ಲಿ ಎರಡು ಕೆರೆಗಳಿಗೆ 3.42 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಗದಗ್ ಜಿಲ್ಲೆಯಲ್ಲಿ ಎರಡು ಕೆರೆ ಹೂಳು ತೆಗೆದಿದ್ದೇವೆ. ಅದಕ್ಕೆ 1.32 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಇದೇ ತರಹ ಪ್ರತಿ ಒಂದು ಕೆರೆಯ ಹೆಸರು ಮತ್ತು ಅದಕ್ಕೆ ಖರ್ಚು ಮಾಡಿದ ವಿವರ ಬೇಕಾಗಿತ್ತು. ಅದರ ಬಗ್ಗೆ ಮಾಹಿತಿ ಕೊಡಿ ಎಂದು ನಾನು ಮುಂಧುವರಿದು ಪ್ರಶ್ನೆ ಹಾಕಿದ್ದೆ. ಅದನ್ನು ನಿಮ್ಮ ಪಿಎಸ್‌ಗೆ ಹೇಳಿದ್ದೆ.

ಅಧ್ಯಕ್ಷರು :— ವಿವರ ಕಳುಹಿಸಿಕೊಡುತ್ತಾರೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಈಗ ಹೊಸ ಕೆರೆಗಳ ಬೇಡಿಕೆ ಇದೆ. ಹೊಸ ಕೆರೆಗಳ ಬೇಡಿಕೆ ಪ್ರತಿ ಒಂದು ಜಿಲ್ಲೆಯಲ್ಲಿ ಎಷ್ಟು ಇದೆ ಅದರ ಮಾಹಿತಿ ಕೊಡಿ ಎಂದು ಕೇಳಿದ್ದೆ. ದಯವಿಟ್ಟು ಅದನ್ನು ತರಿಸಿಕೊಡಿ.

ಅಧ್ಯಕ್ಷರು :— ತರಿಸಿಕೊಡುತ್ತಾರೆ.

ಶ್ರೀ ಶಿವಾನಂದ ನಾಯಕ್ :— 1757ನೇ ಪ್ರಶ್ನೆಯನ್ನು ಸಣ್ಣ ನೀರಾವರಿ ಮಂತ್ರಿಗಳಲ್ಲಿ ಕೇಳುತ್ತೇನೆ.

ಅಧ್ಯಕ್ಷರು :— ನಿಮ್ಮದು ಉಪ ಪ್ರಶ್ನೆ ಇದೆ ಎಂದು ತಿಳಿದುಕೊಂಡಿದ್ದೆ. ನಿಮ್ಮ ಪ್ರಶ್ನೆ ಎಲ್ಲಿದೆ? ನೀವು ಸ್ವಲ್ಪ ಕಾಯಿರಿ. ನಾವು ಪಟ್ಟಿ ಪ್ರಕಾರ ಹೋಗಬೇಕು.

ವಿಜಾಪುರದ ಕಾರಾಗೃಹದಲ್ಲಿರುವ ಅಜೀವ ಶಿಕ್ಷೆಗೊಳಗಾದ ಖೈದಿಗಳು.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ (ವಿಜಾಪುರ) :— ಮಾನ್ಯ ಬಂದೀಖಾನೆ, ಗೃಹರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ವಿಜಾಪುರ ಜಿಲ್ಲಾ ಕಾರಾಗೃಹದಲ್ಲಿರುವ ಅಜೀವ ಶಿಕ್ಷೆಗೊಳಗಾದ ಖೈದಿಗಳ ಸಂಖ್ಯೆ ಎಷ್ಟು?

ಆ) ಅಲ್ಲಿನ ಖೈದಿಗಳಿಗೆ ನೀಡುತ್ತಿರುವ ಸೌಲಭ್ಯಗಳು ಸಮರ್ಪಕವಾಗಿವೆಯೇ?